**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸ್ಪೆಷಲ್ ಕೇಸ್ ನಂಃ 58/2021 ಪಿ.ಡಬ್ಲ್ಯುಃ 9**
**ಸಿ.ಡಬ್ಲ್ಯುಃ 14**

| | |
|---|---|
| ಸಾಕ್ಷಿದಾರರ ಹೆಸರು | ರಾಘವೇಂದ್ರ ಪೂಜಾರಿ |
| ತಂದೆಯ ಹೆಸರು | ಗುಂಡು ಪೂಜಾರಿ |
| ವಯಸ್ಸು | 37 ವರ್ಷ |
| ಉದ್ಯೋಗ | ಗ್ರಾಫಿಕ್ ಡಿಸೈನರ್ |
| ವಿಳಾಸ | ಉಡುಪಿ |

ದಿನಾಂಕಃ04-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

1) ನಾನು ಉಡುಪಿಯ ಕಿದಿಯೂರು ಹೊಟೇಲಿನ ಕೆಳಭಾಗದ ವರ್ಣ ಕಲರ್ ಲ್ಯಾಬ್ ನಲ್ಲಿ ಡಿಸೈನರ್ ಆಗಿ ಕೆಲಸ ಮಾಡುತ್ತೇನೆ. ದಿನಾಂಕ 01-07-2021 ರಂದು ಪೆನ್ ಡ್ರೈವ್ ಒಂದನ್ನು ಲೋಕಾಯುಕ್ತ ನವರು ತಂದು ಕೊಟ್ಟಿದ್ದರು. ಅದರ ಪ್ರಿಂಟ್ ಔಟ್ ಮಾಡಿಕೊಡಲು ಹೇಳಿದ್ದರು. ಆಗ ಸಹಿ ಮಾಡಿ ಕೊಟ್ಟಿದ್ದೆ, ಆ ಸಹಿಯನ್ನು ನಮ್ಮಲ್ಲಿ ಪ್ರಿಂಟ್ ಮಾಡಿ ಕೊಟ್ಟಿದ್ದಕ್ಕಾಗಿ ಸಹಿ ಮಾಡಿಕೊಟ್ಟಿದ್ದೆ. ಅದನ್ನು ನೋಡಿದರೆ ಗುರುತಿಸಬಲ್ಲೆ. ಷದ್ರಿ ಪ್ರಮಾಣಪತ್ರವನ್ನು ಈಗಾಗಲೇ ನಿ.ಪಿ 34 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 34(ಎ) ಎಂದು ಗುರುತಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಬಿ.ಹೆಚ್. ವಕೀಲರಿಂದಃ ಇಲ್ಲ**

ನಿ.ಪಿ 34 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಆ ದಿನ ನಮ್ಮಲ್ಲಿ ಪ್ರಿಂಟ ಆಗಿದೆ ಎಂಬುದಕ್ಕಾಗಿ ಸಹಿ ಮಾಡಿದ್ದೆ. ನಮ್ಮಲ್ಲಿಯ ಕಂಪ್ಯೂಟರ್ ಗಳನ್ನು ಎಲ್ಲರ ಪೋಟೊಗಳನ್ನು ಪ್ರಿಂಟ್ ತೆಗೆಯಲು ಬಳಸುತ್ತೇವೆ. ಪೊಲೀಸರು ನಮಗೆ ಕೊಟ್ಟ ಪೆನ್ ಡ್ರೈವ ನ ಗಾತ್ರವಾಗಲಿ ನಾವು ಪ್ರಿಂಟ್ ಹಾಕಿದ ಗಾತ್ರವಾಗಲಿ ಗೊತ್ತಿಲ್ಲ. ಪೊಲೀಸರು ನನ್ನ

ಬಳಿ ಬರುವ ಮೊದಲು ನಿ.ಪಿ 34 ನ್ನು ಬರೆದುಕೊಂಡು ಬಂದಿದ್ದರು. ಪೊಲೀಸರು ನನ್ನ ಬಳಿ ಯಾವುದೇ ಪೋಟೋವನ್ನು ಪ್ರಿಂಟ್ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಬಳಿ ಪೋಟೊಗಳನ್ನು ಪ್ರಿಂಟ್ ಮಾಡಿಸಿಕೊಂಡಿದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್. ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ